**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .**

SC. No.165-2022

ದೋ.ಸಾ. 1
ಫ್ರಾ.ಸಾ. 1
ಪ್ರ.ವ.ಬೊ.ದಿನಾಂಕ. 28-07-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಮಹಮ್ಮದ್ ಇಸ್ಮಾಯಿಲ್ |
| ತಂದೆ / ಗಂಡನ ಹೆಸರು | - | ದಾದಾಪೀರ್ |
| ವಯಸ್ಸು | - | 26 |
| ಉದ್ಯೋಗ | - | ಮೆಕಾನಿಕ್ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು 2016 ರಿಂದ 2022 ರವರೆಗೆ ನಾನು ದಾವಣಗೆರೆಯ ಶಿವರಾಮ್ ಡಬೀರ್ ಅಂಡ್ ಕಂಪನಿಯಲ್ಲಿ ಡೀಸೆಲ್ ಮೆಕಾನಿಕ್ ಆಗಿ ಕೆಲಸ ಮಾಡಿರುತ್ತೇನೆ. ನನಗೆ ಜಯಶ್ರೀ ಅಂದರೆ ಚಾ.ಸಾ.14 ರವರ ಪರಿಚಯವಿದ್ದು, ಅವರು ನಾನು ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಗಣಕ ಯಂತ್ರದಲ್ಲಿ ಟ್ಯಾಲಿ ಕೆಲಸವನ್ನು ಮಾಡುತ್ತಿದ್ದರು. ನಾನು ಪ್ರತಿನಿತ್ಯ ಬೆಳಿಗ್ಗೆ 10-00 ಗಂಟೆಗೆ ಕೆಲಸಕ್ಕೆ ಬಂದು ಮದ್ಯಾಹ್ನ ಊಟಕ್ಕೆ ಮನೆಗೆ ಹೋಗಿ ನಂತರ ವಾಪಾಸು ಬಂದು ಸಂಜೆ 7-30 ಗಂಟೆಯವರೆಗೆ ಕೆಲಸ ಮಾಡುತ್ತಿದ್ದೆ. ಮದ್ಯಾಹ್ನಕ್ಕೆ ಊಟಕ್ಕೆ ಅಂದರೆ 2-00 ಗಂಟೆಗೆ ಹೋಗಿ ಬರುತ್ತಿದ್ದೆ. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ.

ಅವರಲ್ಲಿ 1 ನೇ ಆರೋಪಿಯು ಚಾ.ಸಾ.14 ರವರ ಸಂಬಂಧಿಯಾಗಬೇಕು. 2 ನೇ ಆರೋಪಿಯು 1 ನೇ ಆರೋಪಿಯ ಸ್ನೇಹಿತನಾಗಿರುತ್ತಾನೆ. ನಾನು ಮತ್ತು ಚಾ.ಸಾ.14 ಸದರಿ ಕಂಪನಿಯಲ್ಲಿ ಕೆಲಸ ಮಾಡುವಾಗ ಒಬ್ಬರಿಗೊಬ್ಬರು ಪರಸ್ಪರ ಮಾತನಾಡಿಕೊಳ್ಳುತ್ತ ಕೆಲಸ ಮಾಡುತ್ತಿದ್ದೆವು. ಅಲ್ಲದೇ ನಾವಿಬ್ಬರು ಪ್ರೀತಿಸುತ್ತಿದ್ದೆವು. ನಾನು ಚಾ.ಸಾ.14 ರವರನ್ನು ಪ್ರೀತಿಸುತ್ತಿದ್ದ ಕಾರಣ ಈ ಘಟನೆ ಆಗುವ ಮೂರು ತಿಂಗಳ ಮೊದಲಿನಿಂದ 1 ನೇ ಆರೋಪಿಯು ನನ್ನನ್ನು ಬೆದರಿಸುತ್ತಿದ್ದ ಹಾಗೂ ಧಮಕಿ ಹಾಕುತ್ತಿದ್ದ. ಆ ಸಮಯದಲ್ಲಿ ಆತ ನನ್ನ ಬಳಿ ಚಾ.ಸಾ.14 ರವರನ್ನು ಪ್ರೀತಿಸಬೇಡ ಎಂದು ಹೇಳುತ್ತಿದ್ದ. ಆಗ ನಾನು ಆತನ ಬಳಿ ನಾನು ಚಾ.ಸಾ.14 ರವರನ್ನು ಪ್ರೀತಿಸುತ್ತಿದ್ದೇನೆ ಬಿಡುವುದಿಲ್ಲ ಎಂದು ಹೇಳಿರುತ್ತೇನೆ. ಆ ಸಮಯದಲ್ಲಿ 1 ನೇ ಆರೋಪಿಯು ನನ್ನ ಬಳಿ ನಿನಗೆ ಎರಡು ಮೂರು ಬಾರಿ ವಾರ್ನಿಂಗ್ ಕೊಟ್ಟಿದ್ದೇನೆ, ಜೀವ ಸಹಿತ ನೀನು ಉಳಿಯುವುದಿಲ್ಲ ಎಂದು ಹೇಳುತ್ತಿದ್ದ.

ದಿಃ 16-10-2020 ರಂದು ನಾನು ಎಂದಿನಂತೆ ಮದ್ಯಾಹ್ನ 2-00 ಗಂಟೆ ಸಮಯದಲ್ಲಿ ಊಟಕ್ಕೆ ಮನೆಗೆ ಹೋಗುತ್ತಿದ್ದೆ. ಆಗ ನಾನು ನನ್ನ ಡಿಯೋ ಸ್ಕೂಟಿ ವಾಹನದಲ್ಲಿ ತ್ರಿಶೂಲ್ ಟಾಕೀಸ್‌ನ ರಸ್ತೆಯ ಮಾರ್ಗವಾಗಿ ಹೋಗುತ್ತಿದ್ದೆ. ಆ ಸಮಯದಲ್ಲಿ ನಾನು ಸದರಿ ರಸ್ತೆಯ ಕಲ್ಯಾಣ ಮಂಟಪದ ಬಳಿ ಹೋಗುತ್ತಿರುವಾಗ ಆರೋಪಿತರಿಬ್ಬರು ನನ್ನ ವಾಹನವನ್ನು ತಡೆದು ನಿಲ್ಲಿಸಿರುತ್ತಾರೆ. ಆ ಸಮಯದಲ್ಲಿ 1 ನೇ ಆರೋಪಿಯು ಪುನಃ ನನಗೆ ಚಾ.ಸಾ.14 ರವರನ್ನು ಬಿಡದೇ ಇರುವ ಕುರಿತು ಜೀವದ ಕುರಿತು ಬೆದರಿಕೆ ಹಾಕಿರುತ್ತಾನೆ. ಆ ಸಮಯದಲ್ಲಿ

ನನ್ನ ಎದುರುಗಡೆ 1 ನೇ ಆರೋಪಿಯು ನಿಂತುಕೊಂಡಿದ್ದು, ಹಿಂದುಗಡೆ 2 ನೇ ಆರೋಪಿಯು ನಿಂತಿದ್ದ. ಆ ಸಮಯದಲ್ಲಿ ಹಿಂದುಗಡೆಯಿದ್ದ 2 ನೇ ಆರೋಪಿಯು ನನ್ನ ಹಿಂಬದಿಯ ಬೆನ್ನಿಗೆ ಚಾಕುವಿನಿಂದ ಚುಚ್ಚಿರುತ್ತಾನೆ. ಆ ಸಮಯದಲ್ಲಿ ನಾನು ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟಾಗ 1 ನನೇ ಆರೋಪಿಯು 2 ನೇ ಆರೋಪಿಯ ಕಡೆಯಿಂದ ಚಾಕುವನ್ನು ತೆಗೆದುಕೊಂಡು ನನ್ನ ಕುತ್ತಿಗೆಯ ಬಳಿ ಚುಚ್ಚಲು ಬಂದಿದ್ದು, ಆಗ ನಾನು ನನ್ನ ಎಡಗೈಯಿಂದ ತಡೆದಿದ್ದು, ಚಾಕು ನನ್ನ ಎಡಗೈಗೆ ತಾಗಿರುತ್ತದೆ. ಆ ರೀತಿ ಚಾಕು ಚುಚ್ಚಿದ ಕಾರಣ ನನ್ನ ಬೆನ್ನಿನಲ್ಲಿ ಹಾಗೂ ಎಡಗೈಗಳಲ್ಲಿ ರಕ್ತ ಬಂದಿರುತ್ತದೆ. 1 ನೇ ಆರೋಪಿಯು ನನಗೆ ಚಾಕುವನ್ನು ಇರಿಯಲು ಬಂದ ಸಮಯದಲ್ಲಿ 2 ನೇ ಆರೋಪಿಯು ನನ್ನ ಕೈಗಳನ್ನು ಹಿಡಿದುಕೊಳ್ಳಲು ಪ್ರಯತ್ನಿಸುತ್ತಿದ್ದ. ಈ ರೀತಿ ಆರೋಪಿತರು ನನ್ನ ಕತ್ತಿಗೆ ಇರಿದು ಸಾಯಿಸಲು ಪ್ರಯತ್ನಿಸಿರುತ್ತಾರೆ. ಆ ರೀತಿ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿದ ಕಾರಣ ನಾನು ಅಲ್ಲಿ ಪ್ರಜ್ಞೆ ತಪ್ಪಿ ಬಿದ್ದಿರುತ್ತೇನೆ.

ಆ ಸಮಯದಲ್ಲಿ ಸದರಿ ಸ್ಥಳಕ್ಕೆ ಓರ್ವ ವ್ಯಕ್ತಿಯು ಬಂದಿದ್ದು, ಅಲ್ಲದೇ ಒಂದು ಪೋಲೀಸ್ ಜೀಪ್ ಕೂಡ ಬಂದಿದ್ದು, ನಂತರ ಅವರು ನನ್ನನ್ನು ಚಿಗಟೇರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನಂತರ ಅಲ್ಲಿಂದ ನನ್ನನ್ನು ಎಸ್ ಎಸ್ ಐ ಟಕ್ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನಾನು ಆಸ್ಪತ್ರೆಯಲ್ಲಿ ಇರುವಾಗ ಅಲ್ಲಿಗೆ ಪೋಲೀಸರು ಬಂದಿದ್ದು, ನಾನು ಅವರಿಗೆ ಪ್ರಕರಣದ ಮಾಹಿತಿಯನ್ನು ನೀಡಿದ್ದು, ಅವರು ಅದನ್ನು ಬರೆದುಕೊಂಡಿರುತ್ತಾರೆ. ಸಾಕ್ಷಿಯು ತನ್ನ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದು ದೂರು ಆಗಿದ್ದು, ಅದನ್ನು ನಿ.ಪಿ.1 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

ನಾನು ಐ ಟೆಕ್ ಆಸ್ಪತ್ರೆಯಲ್ಲಿ ಐಸಿಯುನಲ್ಲಿ ಸುಮಾರು ಒಂದು ವಾರಗಳ ಕಾಲ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ಆಸ್ಪತ್ರೆಯಿಂದ ಚಿಕಿತ್ಸೆ ಪಡೆದುಕೊಂಡು ಬಂದ ಬಳಿಕ ಕೆಟಿಜೆ ನಗರ ಪೊಲೀಸ್ ಠಾಣೆಗೆ ಹೋಗಿ ಘಟನೆಯ ಸಮಯದಲ್ಲಿ ನಾನು ಧರಿಸಿದ್ದ ಶರ್ಟ್‌ನ್ನು ಮತ್ತು ಪ್ಯಾಂಟನ್ನು ನೀಡಿರುತ್ತೇನೆ. ಅವುಗಳಿಗೆ ರಕ್ತ ತಾಗಿತ್ತು. ಆ ಸಮಯದಲ್ಲಿ ಸದರಿ ಬಟ್ಟೆಗಳನ್ನು ಪೋಲೀಸರು ವಶಕ್ಕೆ ಪಡೆದು, ಪಂಚನಾಮೆ ಬರೆದು ಪೋಟೋ ತೆಗೆದಿರುತ್ತಾರೆ. ಸದರಿ ಪಂಚನಾಮೆಯನ್ನು ನಿ.ಪಿ.2 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆಯಲಾದ ಒಂದು ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು.

ನಾನು ಪೋಲೀಸರಿಗೆ ನೀಡಿದ ಪ್ಯಾಂಟು ಮತ್ತು ಶರ್ಟನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಆರೋಪಿ ಪರ ವಕೀಲರ ಸಮಕ್ಷಮದಲ್ಲಿ ಎರಡು ಬಟ್ಟೆಯ ಚೀಲಗಳನ್ನು ಸೀಲು ತೆರೆದು ತೋರಿಸಲಾಗಿದ್ದು, ಸಾಕ್ಷಿಯು ಅವುಗಳಲ್ಲಿ ಇರುವ ಶರ್ಟು ಮತ್ತು ಪ್ಯಾಂಟನ್ನು ನೋಡಿ ಗುರುತಿಸಿದ್ದು, ಅವುಗಳಲ್ಲಿ ಶರ್ಟನ್ನು ಮು.ಮಾ.1 ಎಂದು, ಅದನ್ನು ಇಡಲಾದ ಚೀಲವನ್ನು ಮು.ಮಾ.2 ಎಂದು ಗುರುತಿಸಲಾಯಿತು. ಮು.ಮಾ.1 ನ್ನು ನೋಡಿ ಸಾಕ್ಷಿಯು ಅದಕ್ಕೆ ರಕ್ತ ತಾಗಿತ್ತು ಎಂದು ಗುರುತಿಸಿರುತ್ತಾರೆ. ಅಲ್ಲದೇ ಮು.ಮಾ.2 ರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮು.ಮಾ.2(ಎ) ಎಂದು ಗುರುತಿಸಲಾಯಿತು.

ಅದೇ ರೀತಿ ಇನ್ನೊಂದು ಚೀಲದಲ್ಲಿ ಇರುವ ಪ್ಯಾಂಟನ್ನು ಮು.ಮಾ.3 ಎಂದು, ಅದನ್ನು ಇಡಲಾದ ಚೀಲವನ್ನು ಮು.ಮಾ.4 ಎಂದು ಗುರುತಿಸಲಾಯಿತು. ಮು.ಮಾ.3 ನ್ನು ನೋಡಿ ಸಾಕ್ಷಿಯು ಅದಕ್ಕೆ ರಕ್ತ ತಾಗಿತ್ತು ಎಂದು ಗುರುತಿಸಿರುತ್ತಾರೆ. ಅಲ್ಲದೇ ಮು.ಮಾ.4 ರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮು.ಮಾ.4(ಎ) ಎಂದು ಗುರುತಿಸಲಾಯಿತು.

ಅಲ್ಲದೇ ಆರೋಪಿತರು ನನಗೆ ಹಲ್ಲೆ ಮಾಡಿದ ಸ್ಥಳದಲ್ಲಿಯೂ ಕೂಡ ರಕ್ತ ಬಿದ್ದಿತ್ತು. ಸದರಿ ದಿನ ಆರೋಪಿತರು ನನಗೆ ಹಲ್ಲೆ ಮಾಡಿದ ಚಾಕುವನ್ನು ನಾನು ನೋಡಿದ್ದು, ಸದರಿ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಇನ್ನೊಂದು ಚೀಲವನ್ನು ಆರೋಪಿ ಪರ ವಕೀಲರ ಸಮಕ್ಷಮ ಅರಗು ಸೀಲನ್ನು ತೆರೆದು ತೋರಿಸಲಾಗಿದ್ದು, ಸಾಕ್ಷಿಯು ಅದರಲ್ಲಿ ಇರುವ ಚಾಕುವನ್ನು ಗುರುತಿಸಿದ್ದು, ಕಾರಣ ಚಾಕುವನ್ನು ಮು.ಮಾ.5 ಎಂದು, ಅದನ್ನು ಇಡಲಾದ ಬಟ್ಟೆಯ ಚೀಲವನ್ನು ಮು.ಮಾ.6 ಎಂದು ಗುರುತಿಸಲಾಯಿತು. ಅಲ್ಲದೇ ಆರೋಪಿತರು ಘಟನೆಯ ಸಮಯದಲ್ಲಿ ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ಸಾಯಿಸುತ್ತೇವೆ ಎಂದು ಬೆದರಿಕೆ ಕೂಡ ಹಾಕಿರುತ್ತಾರೆ. ಆರೋಪಿತರು ನನ್ನನ್ನು ತಡೆಯುವ ಪೂರ್ವದಲ್ಲಿ ಯಾವುದರ ಮೂಲಕ ಬಂದಿದ್ದರು ಎಂದು ನನಗೆ ತಿಳಿದಿರುವುದಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ಕಡತದಲ್ಲಿ ಇರುವ ಒಂದು ಪೋಟೋವನ್ನು ತೋರಿಸಲಾಗಿದ್ದು, ಸಾಕ್ಷಿಯು ಸದರಿ ಪೋಟೋವನ್ನು ನೋಡಿ ಅದು 1 ನೇ ಆರೋಪಿಯ ಬೈಕಿನ ಪೋಟೋ ಎಂದು ತಿಳಿಸಿರುತ್ತಾರೆ. ಸದರಿ ಪೋಟೋವನ್ನು ನಿ.ಪಿ.4 ಎಂದು ಗುರುತಿಸಲಾಯಿತು. ಈ ಹಂತದಲ್ಲಿ 1 ನೇ ಆರೋಪಿಯು ಸದರಿ ಬೈಕನ್ನು ನ್ಯಾಯಾಲಯದಿಂದ ಬಿಡಿಸಿಕೊಂಡು ಹೋಗಿದ್ದು, ಕಾರಣ ಸದರಿ ಬೈಕನ್ನು ಮು.ಮಾ.7 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ. ನಿ.ಪಿ.1 ನ್ನು ಪೋಲೀಸರು ಬರೆದಿದ್ದು, ಅದನ್ನು ನಾನು ಓದಿ ತಿಳಿದು ಸಹಿ ಮಾಡಿರುತ್ತೇನೆ. ಸದರಿಯವರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಆ ಸಮಯದಲ್ಲಿ ನನ್ನ ತಂದೆ ನನ್ನ ಜೊತೆ ಇದ್ದರು. ಅವರನ್ನು ಹೊರತುಪಡಿಸಿ ಬೇರೆ ಯಾರು ನನ್ನ ಜೊತೆ ಇರಲಿಲ್ಲ. ಘಟನೆ ನಡೆದಿದೆ ಎಂದು ಹೇಳುವ ಸ್ಥಳದ ಸುತ್ತ ಮುತ್ತಲೂ ತ್ರಿಶೂಲ್ ಟಾಕೀಸ್, ತ್ರಿಶೂಲ್ ಕಂಪರ್ಟ್ಸ್ ಮತ್ತು ಚೌಲ್ಟ್ರಿ ಇದೆ ಎಂದರೆ ಸರಿ. ಸದರಿ ಮೂರು ಕಟ್ಟಡಗಳಿಗೂ ಕೂಡ ಸಿಸಿ ಟಿವಿಯನ್ನು ಅಳವಡಿಸಲಾಗಿದೆ ಎಂದರೆ ಸರಿ. ನನಗೆ ಹಲ್ಲೆ ಮಾಡಿದ್ದಾರೆ ಎಂದು ಹೇಳುವ ಸ್ಥಳವು ಮುಖ್ಯ ರಸ್ತೆಯಾಗಿರುತ್ತದೆ. ಅದು ಸಿಮೆಂಟ್ ರಸ್ತೆಯಾಗಿರುತ್ತದೆ ಎಂದರೆ ಸಾಕ್ಷಿಯು ತನಗೆ ಮಣ್ಣು ಜಾಗದ ಬಳಿ ಹಲ್ಲೆ ಮಾಡಿದ್ದಾರೆ ಎಂದು ನುಡಿದಿರುತ್ತಾರೆ.

ನಾನು ಮುಖ್ಯ ವಿಚಾರಣೆಯಲ್ಲಿ ಘಟನೆಯ ಮೂರು ತಿಂಗಳ ಮೊದಲು 1 ನೇ ಆರೋಪಿ ಬೆದರಿಕೆ ಹಾಕಿದ್ದ ಎಂದು ನುಡಿದಿದ್ದು, ಅದನ್ನು ಆತ ಮೊಬೈಲ್ ಮೂಲಕ ಬೆದರಿಕೆ ಹಾಕಿರುತ್ತಾನೆ. ನಾನು ನಿ.ಪಿ.1 ದೂರಿನಲ್ಲಿ ಈ ರೀತಿ 1 ನೇ ಆರೋಪಿಯು ಮೊಬೈಲ್ ಮೂಲಕ ಬೆದರಿಕೆ ಹಾಕಿದ್ದ ಎಂದು ಹೇಳಿರುವುದಿಲ್ಲ ಎಂದರೆ ಸರಿ. ಆ ರೀತಿ 1 ನೇ ಆರೋಪಿಯು ಮೊಬೈಲ್ ಮೂಲಕ ಬೆದರಿಕೆ ಹಾಕಿದ್ದಾಗ ನಾನು ನನ್ನ ತಂದೆಗಾಗಲಿ,

ಆರೋಪಿಯ ಪಾಲಕರಿಗಾಗಲಿ ಹಾಗೂ ಪೋಲೀಸರಿಗಾಗಲಿ ದೂರು ಸಲ್ಲಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಅದೇ ರೀತಿ ಆರೋಪಿಯು ಉಳಿದ ದಿನಗಳಲ್ಲಿ ಎಲ್ಲಿ, ಯಾವ ದಿನಾಂಕದಂದು ಬೆದರಿಕೆ ಹಾಕಿದ್ದ ಎಂದು ನನಗೆ ಈಗ ಹೇಳಲು ಸಾಧ್ಯವಿರುವುದಿಲ್ಲ. ಈಗ ಹೇಳಿದ ರೀತಿಯಲ್ಲಿ ಯಾವ ಸ್ಥಳದಲ್ಲಿ ಮತ್ತು ಎಂದು 1 ನೇ ಆರೋಪಿಯು ಬೆದರಿಕೆ ಹಾಕಿದ್ದನು, ಆ ದಿನಗಳಂದು ನನಗೆ ಆರೋಪಿಯ ವಿರುದ್ಧ ದೂರು ದಾಖಲಿಸಲು ಯಾವುದೇ ತೊಂದರೆ ಇರಲಿಲ್ಲ.

1 ನೇ ಆರೋಪಿತನು ಚಾ.ಸಾ.14 ರವರನ್ನು ಪ್ರೀತಿಸುತ್ತಿದ್ದು, ಅವರಿಬ್ಬರು ಮದುವೆಗೆ ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿ ಹಾಗೂ ಚಾ.ಸಾ.14 ಮಾವ ಮತ್ತು ಸೊಸೆ ಎಂದರೆ ಸರಿ. ನಾನು ಮತ್ತು ಚಾ.ಸಾ.14 ಈ ಮೊದಲು ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆವು ಎಂದರೆ ಸರಿ. ನಾನು ಮುಖ್ಯ ವಿಚಾರಣೆಯಲ್ಲಿ ನುಡಿದಂತೆ "ನಾನು ಚಾ.ಸಾ.14 ರವರನ್ನು ಪ್ರೀತಿಸುತ್ತಿದ್ದ ಕಾರಣ ಈ ಘಟನೆ ಆಗುವ ಮೂರು ತಿಂಗಳ ಮೊದಲಿನಿಂದ 1 ನೇ ಆರೋಪಿಯು ನನ್ನನ್ನು ಬೆದರಿಸುತ್ತಿದ್ದ ಹಾಗೂ ಧಮಕಿ ಹಾಕುತ್ತಿದ್ದ. ಆ ಸಮಯದಲ್ಲಿ ಆತ ನನ್ನ ಬಳಿ ಚಾ.ಸಾ.14 ರವರನ್ನು ಪ್ರೀತಿಸಬೇಡ ಎಂದು ಹೇಳುತ್ತಿದ್ದ. ಆಗ ನಾನು ಆತನ ಬಳಿ ನಾನು ಚಾ.ಸಾ.14 ರವರನ್ನು ಪ್ರೀತಿಸುತ್ತಿದ್ದೇನೆ ಬಿಡುವುದಿಲ್ಲ ಎಂದು ಹೇಳಿರುತ್ತೇನೆ." ಎನ್ನುವ ವಿಚಾರ ನಾನು ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ಅದೇ ರೀತಿ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ " ಆ ಸಮಯದಲ್ಲಿ ನನ್ನ ಎದುರುಗಡೆ 1 ನೇ ಆರೋಪಿಯು ನಿಂತುಕೊಂಡಿದ್ದು, ಹಿಂದುಗಡೆ 2 ನೇ ಆರೋಪಿಯು ನಿಂತಿದ್ದ. ಆ ಸಮಯದಲ್ಲಿ ಹಿಂದುಗಡೆಯಿದ್ದ 2 ನೇ ಆರೋಪಿಯು ನನ್ನ ಹಿಂಬದಿಯ ಬೆನ್ನಿಗೆ ಚಾಕುವಿನಿಂದ ಚುಚ್ಚಿರುತ್ತಾನೆ. ಆ ಸಮಯದಲ್ಲಿ ನಾನು ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟಾಗ 1 ನೇ ಆರೋಪಿಯು 2 ನೇ ಆರೋಪಿಯ ಕಡೆಯಿಂದ ಚಾಕುವನ್ನು ತೆಗೆದುಕೊಂಡು ನನ್ನ ಕುತ್ತಿಗೆಯ ಬಳಿ ಚುಚ್ಚಲು ಬಂದಿದ್ದು, ಆಗ ನಾನು ನನ್ನ ಎಡಗೈಯಿಂದ ತಡೆದಿದ್ದು, ಚಾಕು ನನ್ನ ಎಡಗೈಗೆ ತಾಗಿರುತ್ತದೆ." ಎನ್ನುವ ವಿಚಾರವನ್ನು ಕೂಡ ನಾನು ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ಅದೇ ರೀತಿ ಮುಖ್ಯ ವಿಚಾರಣೆಯಲ್ಲಿ " ಈ ರೀತಿ ಆರೋಪಿತರು ನನ್ನ ಕತ್ತಿಗೆ ಇರಿದು ಸಾಯಿಸಲು ಪ್ರಯತ್ನಿಸಿರುತ್ತಾರೆ. ಆ ರೀತಿ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿದ ಕಾರಣ ನಾನು ಅಲ್ಲಿ ಪ್ರಜ್ಞೆ ತಪ್ಪಿ ಬಿದ್ದಿರುತ್ತೇನೆ. ಆ ಸಮಯದಲ್ಲಿ ಸದರಿ ಸ್ಥಳಕ್ಕೆ ಓರ್ವ ವ್ಯಕ್ತಿಯು ಬಂದಿದ್ದು, ಅಲ್ಲದೇ ಒಂದು ಪೋಲೀಸ್ ಜೀಪ್ ಕೂಡ ಬಂದಿದ್ದು, ನಂತರ ಅವರು ನನ್ನನ್ನು ಚಿಗಟೇರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. " ಎನ್ನುವ ವಿಚಾರವನ್ನು ಕೂಡ ನಾನು ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ದೂರಿನಲ್ಲಿ ಆರೋಪಿತರು ಉಪಯೋಗಿಸಿದ್ದಾರೆ ಎನ್ನುವ ಮು.ಮಾ.5 ರ ವಿನ್ಯಾಸವನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಮು.ಮಾ.1 ಮತ್ತು 3 ಕ್ಕೆ ರಕ್ತ ತಾಗಿತ್ತು ಎನ್ನುವ ವಿಚಾರವನ್ನು ಕೂಡ ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಈಗ ಮೇಲೆ ಹೇಳಿದಂತಹ ಎಲ್ಲಾ ವಿಚಾರಗಳನ್ನು ನಾನು ದೂರಿನಲ್ಲಿ ಹೇಳದೇ ಇದ್ದರೂ ಕೂಡ ಹೇಳಿದ್ದೇನೆ ಎಂದು ಈ ಹಂತದಲ್ಲಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಹಲ್ಲೆ ಮಾಡಿದ ಕಾರಣ ನಾನು ಪ್ರಜ್ಞೆ ತಪ್ಪಿದ

ವೇಳೆಯಲ್ಲಿ ಪೋಲೀಸ್ ಜೀಪು ಬಂದಿರುವುದಾಗಿ ನುಡಿದಿದ್ದು, ಆದರೆ ಸದರಿ ಜೀಪಿನಲ್ಲಿ ಎಷ್ಟು ಜನ ಇದ್ದರು ಎಂದು ನನಗೆ ಈಗ ಹೇಳಲು ಸಾಧ್ಯವಿರುವುದಿಲ್ಲ. ಘಟನೆಯ ಬಳಿಕ ಆರೋಪಿತರು ಯಾವ ಕಡೆಗೆ ಓಡಿ ಹೋಗಿದ್ದಾರೆ ಎನ್ನುವ ವಿಚಾರ ನನಗೆ ತಿಳಿದಿರುವುದಿಲ್ಲ.

1 ನೇ ಆರೋಪಿಯು ನ್ಯಾಯಾಂಗ ಬಂಧನಕ್ಕೆ ಹೋಗಿ ಬಂದ ಬಳಿಕ ನಾನು ಆತನ ಮೇಲೆ ಚಾಕುವಿನಿಂದ ಹಲ್ಲೆ ಮಾಡಿ ಕೊಲೆಗೆ ಪ್ರಯತ್ನಿಸಿದ್ದೆ ಎಂದು ದೂರನ್ನು ಸಲ್ಲಿಸಿದ್ದು, ಆ ಕುರಿತು ಪೋಲೀಸರು ನನ್ನನ್ನು ವಿಚಾರಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿಗೆ ಒಂದು ಹೇಳಿಕೆಯನ್ನು ತೋರಿಸಿ ದಿಃ 21-01-2021 ರಂದು ಕೆಟಿಜೆ ನಗರ ಪೋಲೀಸರು ನನ್ನ ಹೇಳಿಕೆಯನ್ನು ಈ ರೀತಿಯಾಗಿ ಪಡೆದುಕೊಂಡಿದ್ದಾರೆ ಎಂದು ಪ್ರಶ್ನಿಸಲಾಗಿದ್ದು, ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಅದನ್ನು ನಿರಾಕರಿಸಿರುತ್ತಾರೆ. ಅದೇ ರೀತಿ ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯಲ್ಲಿ ದಿಃ 16-10-2020 ರಂದು ರಾಜು ಎನ್ನುವ ವ್ಯಕ್ತಿಯ ಮೇಲೆ ಹಲ್ಲೆಯಾಗಿದೆ ಎನ್ನುವ ವಿಚಾರಕ್ಕೆ ಸಂಬಂಧಿಸಿ ಎಂಎಲ್ ಸಿ ದಾಖಲಾಗಿದೆ ಎಂದು ತೋರಿಸಲಾಗಿದ್ದು, ಸಾಕ್ಷಿಯು ಸದರಿ ದಾಖಲೆಯ ಅಂಶಗಳನ್ನು ಓದಿ ತಿಳಿದುಕೊಂಡಿದ್ದು, ಆದರೆ ಸದರಿ ದಾಖಲಾತಿ ಯಾವುದರ ಕುರಿತಾದ ದಾಖಲಾತಿ ಎಂದು ತನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ.

ನಾನು ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ಚಾ.ಸಾ.14 ರವರಿಗೆ ಪದೇ ಪದೇ ಚುಡಾಯಿಸುತ್ತಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಆಕೆಗೆ ನನ್ನನ್ನೇ ಮದುವೆಯಾಗು ಎಂದು ಒತ್ತಾಯ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಈ ಕುರಿತಾಗಿ ಚಾ.ಸಾ.14 ರವರ ಪಾಲಕರು ನಾನು ಕೆಲಸ ಮಾಡುತ್ತಿದ್ದ ಕಂಪನಿಯ ಬಳಿ ಬಂದು ನನಗೆ ಚಾ.ಸಾ.14 ರವರಿಗೆ ತೊಂದರೆ ನೀಡದಂತೆ ವಾರ್ನಿಂಗ್ ಮಾಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಚಾ.ಸಾ.14 ರವರ ಪಾಲಕರಿಗೆ ಹಾಗೂ 1 ನೇ ಆರೋಪಿಗೆ ನಾನು ಚಾ.ಸಾ.14 ರವರನ್ನೇ ಮದುವೆಯಾಗುತ್ತೇನೆ ಎಂದು ಬೆದರಿಕೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಚಾ.ಸಾ.14 ರವರನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ಕೆಲವೊಂದು ಪೋಟೋಗಳನ್ನು ತೋರಿಸಲಾಗಿದ್ದು, ಸಾಕ್ಷಿಯು ಸದರಿ ಪೋಟೋಗಳಲ್ಲಿ ಇರುವ ವ್ಯಕ್ತಿಗಳು 1 ನೇ ಆರೋಪಿ ಹಾಗೂ ಚಾ.ಸಾ.14 ಎಂದು ಗುರುತಿಸಿರುತ್ತಾರೆ. ಸದರಿ ಪೋಟೋಗಳು ಇರುವ ಹಾಳೆಯು ಜೆರಾಕ್ಸ್ ಪೋಟೋಗಳಾಗಿದ್ದು, ಈ ಹಂತದಲ್ಲಿ ಅವುಗಳನ್ನು ನಿಶಾನೆಗೊಳಪಡಿಸಲು ಅಭಿಯೋಜಕರು ತಕರಾರು ವ್ಯಕ್ತಪಡಿಸಿದ್ದು, ಅವುಗಳ ನೈಜತೆಯ ಕುರಿತಾಗಿ ಹೊಣೆಗಾರಿಕೆಯನ್ನು ಆರೋಪಿತರ ಮೇಲೆ ಹೊರಿಸಿ ಸದರಿ ದಾಖಲೆಯನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಈ ರೀತಿಯಾಗಿ ಚಾ.ಸಾ.14 ರವರ ಪಾಲಕರು ಹಾಗೂ 1 ನೇ ಆರೋಪಿಯು ನನ್ನಲ್ಲಿ ಕೇಳಿಕೊಂಡಾಗಲೂ ಕೂಡ ನಾನು ಅವರನ್ನು ಗದರಿಸಿದ್ದು, ನಂತರ ಅವರೆಲ್ಲರೂ ಪುನಃ ನನ್ನಲ್ಲಿ ಕೇಳಲು ಬಂದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಚಾ.ಸಾ.14 ರವರನ್ನೇ ಮದುವೆಯಾಗುತ್ತೇನೆ ಎಂದು ಹೇಳುತ್ತ ಚಾಕುವಿನಿಂದ 1 ನೇ ಆರೋಪಿಗೆ ಹಲ್ಲೆ ಮಾಡಿ ತೀವ್ರ ಸ್ವರೂಪದ ಗಾಯಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿಗೆ ಕೊಲೆ ಮಾಡುವ ಪ್ರಯತ್ನದಲ್ಲಿ ಈಗ ಮುಖ್ಯ ವಿಚಾರಣೆಯಲ್ಲಿ ಹೇಳಿದ ಗಾಯಗಳು ಚಾಕು ತಾಗಿ ನನಗೆ ಆದಂತಹ ಗಾಯಗಳು ಎಂದರೆ ಸರಿಯಲ್ಲ.

ಆರೋಪಿತರು ಮು.ಮಾ.5 ರಿಂದ ನನ್ನ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ಮೂರು ಬಾರಿ ನನಗೆ ಈ ಮೊದಲು ಧಮಕಿ ಹಾಕಿದ್ದ, ನಂತರ ಆರೋಪಿತರು ಸೇರಿ ನನಗೆ ಕೊಲೆ ಮಾಡುವ ಪ್ರಯತ್ನ ಮಾಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಣಗೆರೆಯಲ್ಲಿ ಈ ಮೊದಲು ಕೆಲಸ ಮಾಡುತ್ತಿದ್ದ ಪೋಲೀಸ್ ಉಪಾಧೀಕ್ಷಕ ಬಾಬು ಎನ್ನುವವರು ನನ್ನ ಸಂಬಂಧಿ ಎಂದರೆ ಸರಿ. ಅವರ ಪ್ರಭಾವಕ್ಕೊಳಗಾಗಿ ಪೋಲೀಸರು ನಾನೇ 1 ನೇ ಆರೋಪಿಯ ಮೇಲೆ ಹಲ್ಲೆ ಮಾಡಿದ್ದರೂ ಕೂಡ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ದೋಷರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 1 ನೇ ಆರೋಪಿಯು ದೂರು ಸಲ್ಲಿಸಲು ಠಾಣೆಗೆ ಹೋದಾಗ ಆತನನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ಮು.ಮಾ.1, 3 ಮತ್ತು 5 ನಾನೇ ಸೃಷ್ಟಿಸಿದ ವಸ್ತುಗಳು ಎಂದರೆ ಸರಿಯಲ್ಲ. ಆರೋಪಿತರಿಂದ ನನಗೆ ಯಾವುದೇ ತೊಂದರೆ ಆಗಿಲ್ಲ, ನಾನೇ ಅವರಿಗೆ ತೊಂದರೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.07.28 17:04:08 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.